# ಮಕ್ಕಳಿಗಾಗಿ ಬೈಬಲ್
## ಅರ್ಪಿಸುವ

# ಯೆರೆಮೀಯ ಕಣ್ಣೀರಿನ ಮನುಷ್ಯನು




ಬರಹಗಾರರು: Edward Hughes
ಚಿತ್ರಲೇಖಕರು: Jonathan
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Mary-Anne S.


60ರ 28ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada

ಯೆರೆಮೀಯನು ಯೆಹೂದ್ಯ ರಾಜ್ಯದ ಧರ್ಮನಿಷ್ಟ ಮನೆಯಲ್ಲಿ ಜನಿಸಿದನು ಅವನ ತಂದೆ ಹಿಲ್ಕೀಯನು ಒಬ್ಬ ಯಾಜಕನಾಗಿದ್ದನು ಅವರ ಕುಟುಂಬ ಅನಾತೋತ್ ಎಂಬ ಊರಿನಲ್ಲಿ ವಾಸಿಸುತ್ತಿದ್ದರು. ಅದು ಯೆರೂಸಲೇಮಿನಿಂದ ಬಹಳ ದೂರವೇನಿರಲಿಲ್ಲ. ಬಹುಶಃ ಯೆರೇಮೀಯನ ತಂದೆ ತಾಯಿಗಳು ಅವನು ಸಹ ಒಬ್ಬ ಯಾಜಕನಾಗುವನೆಂದು ಅಂದುಕೊಂಡಿರಬಹುದು. ಆದರೆ ದೇವರ ಯೋಚನೆ ಬೇರೆಯಾಗಿತ್ತು.



1



ಯೆರೆಮೀಯನ ಜನನದ ಕಾಲದಲ್ಲಿ ದೇವರ ಜನರು ದೇವರ ವಾಕ್ಯದಂತೆ ನಡೆದುಕೊಳ್ಳುತ್ತಿರಲಿಲ್ಲ ಬಹಳಷ್ಟು ಮಟ್ಟಿಗೆ ಎಲ್ಲರೂ ರಾಜನಿಂದ ಹಿಡಿದು ದಿನ ಕೆಲಸದವನ ತನಕ, ದೇವರ ಪರಿಶುದ್ಧ ಆಲಯದಲ್ಲಿಲ್ಯೂ ಸಹ ಅನ್ಯ ದೇವರುಗಳನ್ನು ಆರಾಧಿಸಿದರು!

2


ಯೆರೇಮೀಯನು
ಯೌವನಸ್ಥನಾದಾಗ
ದೇವರು ಅವನೊಂದಿಗೆ ಮಾತಾಡಿದನು “ನಾನು
ನಿನ್ನನ್ನು ಗರ್ಭದಲ್ಲಿ ರೂಪಿಸುವುದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು” ...
3
... ಎಂದು ದೇವರು ಯೆರೆಮೀಯನಿಗೆ ಹೇಳಿದನು “ಹಾಗೂ
ನೀನು ನನಗೋಸ್ಕರವಾಗಿ ಮಾತಾಡುವಿ ಎಂದು ಹೇಳಿದನು”.
4
ದೇವರ ಕರೆಯು ಯೆರೆಮೀಯನನ್ನು ಹೆದರಿಸಿತು ಎಂದು ಕಾಣುತ್ತದೆ “ಅಯ್ಯೋ ಕರ್ತನಾದ ಯೆಹೋವನೇ! ಎಂದು ಕೂಗಿದನು. ನಾನು ಮಾತು ಬಲ್ಲವನಲ್ಲ, ನಾನು ಇನ್ನೂ ಬಾಲಕನು”, ಅವನು ಬಾಲಕನಿಗಿಂತ ಹೆಚ್ಚಾಗಿದ್ದನು ಅವನಿಗೆ ಇಪ್ಪತ್ತು  ವರುಷಗಳು ಆಗಿತ್ತು. ಆದರೆ ಯೆರೆಮೀಯನು ದೇವರಿಗೋಸ್ಕರ ತನ್ನ
ಸುತ್ತ ಇದ್ದ ದುಷ್ಟಕಾರ್ಯಗಳ
ವಿರುದ್ಧವಾಗಿ ಮಾತಾಡಬಲ್ಲನು
ಎಂದು ಯೋಚಿಸಲಿಲ್ಲ.
5
“ಅಂಜಬೇಡ” ಎಂದು ದೇವರು ಯೆರೆಮೀಯನಿಗೆ
ಭರವಸೆ ಕೊಟ್ಟನು: “ನಾನು ನಿನ್ನನ್ನು ಕಳುಹಿಸಿದಲ್ಲಿ
ಹೋಗು ನಾನು
ಹೇಳಿದ್ದನ್ನು
ಹೇಳು,
ನಾನು
ನಿನೊಂದಿಗೆ
ಇದ್ದೇನೆ ಹಾಗೂ
ನಾನು ನಿನ್ನನ್ನು
ರಕ್ಷಿಸುವೆನು” ...
6
... ನಂತರ ದೇವರು ಒಂದು ವಿಶೇಷ
ಕಾರ್ಯವನ್ನು
ಮಾಡಿದನು
ಹಾಗೂ
ಯೆರೆಮೀಯನ
ಬಾಯನ್ನು ಮುಟ್ಟಿದನು.
7
ದೇವರು ಯೆರೇಮಿಯನಿಗೆ ಶಕ್ತಿ, ಧೈರ್ಯ ಹಾಗೂ ಜ್ಞಾನವನ್ನು ಕೊಟ್ಟನು. ಅವನು ಧೈರ್ಯವಾಗಿ ಮಾತಾಡತೊಡಗಿದನು. ದೇವರು ಅವರನ್ನು ಪ್ರೀತಿಸುತ್ತಾನೆ ಹಾಗೂ ಅವರಿಗೆ ಸಹಾಯ ಮಾಡಬೇಕೆಂದಿದ್ದಾನೆ ಎಂದು ಜನರಿಗೆ ನೆನಪು ಮಾಡಿದನು. ಆದರೆ ಯಾರು ಅವನಿಗೆ ಕಿವಿಗೊಡಲಿಲ್ಲ
ರಾಜನು ಸಹ
ಕೇಳಲಿಲ್ಲ.
8

ಯಾಜಕರು ಸಹ ಕೋಪಿಸಿಕೊಂಡು ಅವನಿಗೆ ದೇವರ ಬಗ್ಗೆ ಮಾತಾಡುವುದನ್ನು ನಿಲ್ಲಿಸಿಬಿಡು ಎಂದು ಹೇಳಿದರು. ಅಲ್ಲಿದ್ದ ಸುಳ್ಳು ಪ್ರವಾದಿಗಳು ಯೆರೆಮೀಯನು ನಿಜವನ್ನು ಹೇಳುತ್ತಿಲ್ಲವೆಂದು ಹೇಳಿದರು.



9

ಯೆರೆಮೀಯನು ಜನರಿಗೆ ಒಂದು ಘಟನೆಯನ್ನು ನೆನಪಿಸಿದನು. ಸುಮಾರು ನೂರು ವರ್ಷಗಳ ಹಿಂದೆ, ಇಸ್ರಾಯೇಲ ರಾಜ್ಯದ ಉತ್ತರ ದಿಕ್ಕಿನವರು ದೇವರನ್ನು ತೊರೆದೇ ಬಿಟ್ಟರು. ಅವರ ಶತ್ರುಗಳಾದ ಅಸ್ಸೇರಿಯರು ಅವರನ್ನು ಆಕ್ರಮಿಸಿ ಎಲ್ಲಾ ಇಸ್ರಾಯೇಲರನ್ನು ದೂರದ ಪ್ರಾಂತಕ್ಕೆ ಒಯ್ಯಲ್ಪಟ್ಟರು.



10



ಈಗ ದಕ್ಷಿಣ ರಾಜ್ಯದ ಯೆಹೂದ್ಯ ಜನರು ದೇವರನ್ನು ತೊರೆದುಬಿಟ್ಟರು. ಶತ್ರು ಸೈನ್ಯ ಈಗಾಗಲೇ ಹೊರಟಿತ್ತು! ದೇವರು ಆತನ ಜನರನ್ನು ಆಕ್ರಮಿಸಿ ದೇಶಭ್ರಷ್ಟರನ್ನಾಗಿ ಮಡುವನೋ?

11

ಜನರು ಅವರ ವಿಗ್ರಹಗಳನ್ನು ನಂಬುತ್ತಿದ್ದರು. ವಿಗ್ರಹಗಳು ಅವರನ್ನು ಶತ್ರುಗಳಿಂದ ರಕ್ಷಿಸುತ್ತದೋ? ಇಲ್ಲ! ದೇವರು ಮಾತ್ರವೇ ಅವರನ್ನು ರಕ್ಷಿಸಬಲ್ಲನು. ಜನರು ಯೆರೆಮೀಯನ ಮೇಲೆ ಕೋಪಿಸಿಕೊಂಡರು. ಅವರು ಅವನನ್ನು ಕೊಲ್ಲಲು ಸಂಚು ಹಾಕಿದರು. ಆದರೆ ದೇವರು ಆತನ ಸೇವಕನನ್ನು ರಕ್ಷಿಸಿದನು.



12

ಕೊನೆಗೂ! ದೇವರು ಹೇಳಿದ ಸಂಗತಿ, ಯೆರೆಮೀಯನನ್ನು ಆಶ್ಚರ್ಯ ಪಡಿಸಿರಬಹುದು. ದೇವರು “ಈ ಜನರಿಗಾಗಿ ಪ್ರಾರ್ಥಿಸಬೇಡ ಅವರು ನನ್ನ ಸಹಾಯಕ್ಕಾಗಿ ಕೂಗಿದಾಗ ನಾನು ಕಿವಿಗೊಡೆನು” ಎಂದನು.



13

ಯೆರೆಮೀಯನು ಅರಸನಿಗೆ ನೀನು ಬಾಬೆಲಿನ ಸೈನ್ಯದ ಜೊತೆಯಲ್ಲಿರು ಯುದ್ಧದಲ್ಲಿ ಸೋಲುವಿ ಎಂದು ಎಚ್ಚರಿಸಿದನು. ಅರಸನು ಕೋಪಿಸಿಕೊಂಡು ಸೆರೆಮನೆಗೆ ಹಾಕಿಸಿದನು. ಸೆರೆಮನೆಯಲ್ಲಿಯೂ ಸಹ, ಯೆರೆಮೀಯನು ಪ್ರಚಾರ ಮಾಡುತ್ತಾ ದೇವರನ್ನು ನಂಬುತ್ತಾ ಬಂದನು.



14













ಯೆರೆಮೀಯ ಕಣ್ಣೀರಿನ ಮನುಷ್ಯನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೆರೆಮೀಯನು

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**